**ಪತ್ರಿಕಾ ಪ್ರಕಟಣೆ**

**ವಿಜಯಪುರ**
**ದಿನಾಂಕ: 17.09.2021.**

**1] ವಿಜಯಪುರ ಗ್ರಾಮೀಣ ಪೊಲೀಸ ಠಾಣೆ ಗುನ್ನೆ ನಂ: 297/2021 ಕಲಂ: 32, 34 ಕೆ.ಇ.ಆ್ಯಕ್ಟ**

ದಿನಾಂಕ: 16.09.2021 ರಂದು 20.15 ಗಂಟೆಯ ಸುಮಾರಿಗೆ ಇದರಲ್ಲಿಯ ಆರೋಪಿತನಾದ 1) ಚಂದ್ರಶೇಖರ ಬಸಪ್ಪ ಅರಕೇರಿ 2) ನವೀನ ಬಸಪ್ಪ ಅರಕೇರಿ ಸಾ: ನಾಗಠಾಣ ಇವರು ನಾಗಠಾಣ ಗ್ರಾಮದ ಶಿವಾನಂದ ಮೇತ್ರಿ ಇವರ ಬಾಬತ್ತಿನ ಒಂದು ರೂಮಿನಲ್ಲಿ ಸರಕಾರದಿಂದ ಯಾವುದೇ ಅನುಮತಿ ಪಡೆಯದೆ ತನ್ನ ಬಾಬತ್ತಿನ ರೂಮಿನಲ್ಲಿ ಅಕ್ರಮವಾಗಿ ಮದ್ಯದ ಮತ್ತು ಬೀರ್ ಬಾಟಲಿಗಳಿರುವ ಮದ್ಯ ತುಂಬಿದ ರಟ್ಟಿನ ಬಾಕ್ಸಗಳನ್ನು ಸಂಗ್ರಹಿಸಿ ಇಟ್ಟಿದ್ದು, ಇವುಗಳನ್ನು ನವೀನ ಬಸಪ್ಪ ಅರಕೇರಿ ಸಾ: ನಾಗಠಾಣ ಈತನು ತನ್ನ ಪಾಯ್ದೇಗೋಸ್ಕರ ಸಂಬಂದಿಸಿದ ಪ್ರಾಧಿಕಾರದಿಂದ ಅನುಮತಿಯನ್ನು ಮತ್ತು ಲೈಸನ್ಸ್‌ನ್ನು ಪಡೆಯದೇ ಅನಧಿಕೃತವಾಗಿ ಮದ್ಯ ಮತ್ತು ಬೀರ್‌ಗಳನ್ನು ಸಾರ್ವಜನಿಕರಿಗೆ ಮಾರಾಟ ಮಾಡುವಾಗ ಸಿಕ್ಕ ಅಪರಾಧ. ಈ ಬಗ್ಗೆ ಸ॥ತ॥ ಜಿ ಎಸ್ ಉಪ್ಪಾರ ಪಿಎಸ್‌ಐ ವಿಜಯಪೂರ ರೂರಲ್ ಪಿಎಸ್ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 16.09.2021 ರಂದು ವಿಜಯಪುರ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**2] ಮಹಿಳಾ ಪೊಲೀಸ ಠಾಣೆ ಗುನ್ನಾ ನಂ: 110/2021 ಕಲಂ: ಮಹಿಳೆ ಕಾಣೆ.**

ದಿನಾಂಕ: 13.09.2021 ರಂದು 11.00 ಗಂಟೆಯ ಸುಮಾರಿಗೆ ಇದರಲ್ಲಿಯ ಕಾಣೆಯಾದ ವಿದ್ಯಾಶ್ರೀ ಗಂ॥ ಸುನೀಲ ರಾಠೋಡ ಸಾ॥ ಸಂಕನಾಳ ಹಾಲಿ ಮೀನಾಕ್ಷಿ ಚೌಕ್ ಹತ್ತಿರ ಸಜ್ಜನ ಪಿಜಿಯಿಂದ ಇವಳು ವಿಜಯಪುರ ಶಹರದ ಮೀನಾಕ್ಷಿ ಚೌಕ್ ಹತ್ತಿರ ಇರುವ ಸಜ್ಜನ ಪಿಜಿಯಿಂದ ಯಾರಿಗೂ ಹೇಳದೆ ಕೇಳದೆ ಎಲ್ಲಿಗೋ ಹೋಗಿ ಪರ್ತ ಮನೆಗೆ ಬಾರದೇ ಕಾಣೆಯಾಗಿರುತ್ತಾಳೆ. ಈ ಬಗ್ಗೆ ಲಕ್ಷ್ಮಣ ತಂ॥ ವಾಲು ಚವ್ಹಾಣ ಸಾ॥ ಸಂಕನಾಳ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 16.09.2021 ರಂದು ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**3] ಕಲಕೇರಿ ಪೊಲೀಸ ಠಾಣೆ ಯು.ಡಿ. ನಂ: 116/2021 ಕಲಂ: 78(3) ಕೆ.ಪಿ.ಆ್ಯಕ್ಟ**

ದಿನಾಂಕ: 11.09.2021 ರಂದು 14:40 ಗಂಟೆ ಸುಮಾರಿಗೆ ಇದರಲ್ಲಿಯ ಆರೋಪಿತನಾದ ಖಾಸೀಮ ಲಾಳೆಸಾಬ ಹೊಸಮನಿ ಸಾ। ಕಲಕೇರಿ ಈತನು ಕಲಕೇರಿ ಗ್ರಾಮದ ಬಸ್ಟ್ಯಾಂಡ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ನಿಂತು ಸಾರ್ವಜನಿಕರಿಂದ ಹಣ ಪಡೆದುಕೊಂಡು ಕಲ್ಯಾಣ ಅನ್ನುವ ಓ.ಸಿ. ಜೂಜಾಟದ ಚೀಟಿ ಬರೆದುಕೊಳ್ಳುತ್ತಿದ್ದಾಗ ಸಿಕ್ಕ ಅಪರಾಧ. ಜಪ್ತಾದ ಮಾಲು: 1] ಬಿಳಿ ಹಾಳೆಯ ಮೇಲೆ ಓ.ಸಿ. ಮಟಕಾ ಜೂಜಾಟದ ಅಂಕಿ ಸಂಖ್ಯೆಗಳನ್ನು ಬರೆದ ಚೀಟಿ ಎರಡು 2] ಬಾಲಪೆನ್ ಒಂದು ನೀಲಿ ಮಸಿ ಇದ್ದದ್ದು, 3] ರೊಖ ಹಣ 700/-ರೂ ಈ ಬಗ್ಗೆ ಜಿ ಜಿ ಬಿರಾದಾರ ಮ.ಪಿ.ಎಸ್.ಐ ಕಲಕೇರಿ ಪಿ.ಎಸ್ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 16.09.2021 ರಂದು ಕಲಕೇರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.